# ಸಾರ್ವತ್ರಿಕ ಲೋಕಸಭಾ ಚುನಾವಣೆ-2019ರ ಮತ ಎಣಿಕೆ ಸಿದ್ಧತೆಗಳಿಗೆ ಸಂಬಂಧಿಸಿದಂತೆ ಪತ್ರಿಕಾ ಗೋಷ್ಠಿ.

## ದಿನಾಂಕ: 20-05-2019

1. ಲೋಕಸಭಾ ಚುನಾವಣೆ–2019ರ ಮತದಾನವು ದಿನಾಂಕ: 18–04–2019ರಂದು ನಡೆದಿದ್ದು, ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿ ವ್ಯಾಪ್ತಿಯ ಈ ಕೆಳಕಂಡಂತೆ ಚುನಾವಣಾ ಕಣದಲ್ಲಿ ಅಂತಿಮವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ವಿವರಗಳು ಲೋಕಸಭಾ ಕ್ಷೇತ್ರವಾರು ಈ ಕೆಳಕಂಡಂತಿರುತ್ತವೆ.

| ಕ್ರಮ ಸಂಖ್ಯೆ | ಚುನಾವಣಾಧಿಕಾರಿ | ಒಟ್ಟು ಅಭ್ಯರ್ಥಿಗಳು |
|---|---|---|
| 1. | ಬೆಂಗಳೂರು–ಉತ್ತರ ಲೋಕಸಭಾ ಕ್ಷೇತ್ರ | 31 |
| 2. | ಬೆಂಗಳೂರು–ಕೇಂದ್ರ ಲೋಕಸಭಾ ಕ್ಷೇತ್ರ | 22 |
| 3. | ಬೆಂಗಳೂರು–ದಕ್ಷಿಣ ಲೋಕಸಭಾ ಕ್ಷೇತ್ರ | 25 |

2. ಲೋಕಸಭಾ ಕ್ಷೇತ್ರವಾರು ಮತದಾನವಾಗಿರುವ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಲೋಕಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಒಟ್ಟು ಮತದಾರರ ಸಂಖ್ಯೆ | ಮತಚಲಾಯಿಸಿದ ಮತದಾರರ ಸಂಖ್ಯೆ | ಶೇಕಡವಾರು |
|---|---|---|---|---|
| 1. | 24–ಬೆಂಗಳೂರು–ಉತ್ತರ | 28,48,402 | 15,56,997 | 54.66 % |
| 2. | 25–ಬೆಂಗಳೂರು–ಕೇಂದ್ರ | 22,04,853 | 11,96,697 | 54.28 % |
| 3. | 26–ಬೆಂಗಳೂರು–ದಕ್ಷಿಣ | 22,15,533 | 11,84,745 | 53.47 % |

3. ಮತದಾನ ಮತ ಎಣಿಕೆ ದಿನಾಂಕ ವಿವರಗಳು.

| ಕ್ರಮ ಸಂಖ್ಯೆ | ಚುನಾವಣಾ ಪ್ರಕ್ರಿಯೆಗಳು | ದಿನಾಂಕ | ಸಮಯ |
|---|---|---|---|
| 1 | ಮತ ಎಣಿಕೆ ದಿನಾಂಕ | 23–05–2019 | ಬೆಳಿಗ್ಗೆ 8 ರಿಂದ |
| 2 | ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳುವ ದಿನಾಂಕ: | 27–05–2019 | |

4.ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿಗಳ ವ್ಯಾಪ್ತಿಯ 3 ಲೋಕಸಭಾ ಕ್ಷೇತ್ರಗಳಿಗೆ ನಿಯೋಜನೆಗೊಂಡಿರುವ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು ಮತ್ತು ಅಧಿಕ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಮತ ಎಣಿಕೆ ವೀಕ್ಷಕರುಗಳ ಹೆಸರು ಮತ್ತು ಮೊಬೈಲ್ ಸಂಖ್ಯೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| Sl No | Parlimentary Constiuency | Returning Officer for Parlimentary Constiuency | Assembly Constiuency No & Name | ARO Name & Contact No | Counting Obeserver Name & Mob No |
|---|---|---|---|---|---|
| 1 | 2 | 3 | 4 | 5 | 6 |
| 1 | 24-Banngalore North | B.M.Vijay Shankar., IAS 9945536838 | 153-Yeshwanthpur | A L Manjunath, KAS 9945981675 | **P.S Reddy 7378914111** |
| 2 | | | 155- Dasarahalli | Balarama Lamani, KAS 9113299533 | |
| 3 | | | 156- Mahalakshmi Layout | Vijaya E Ravikumar, KAS 9731180889 | **B. Reddy Sankar Babu** 8810521428 |
| 4 | | | 157-Malleshwaram | Vidyashree Chandaragi, KAS 7829254231 | |
| 5 | | | 151-K R Puram | K H Jagadeesh, KAS 8050545425 | **T. N. Venkatesh** 9087607776 |
| 6 | | | 152-Bytarayanapura | Chandrakanth, KAS 9448496003 | |

| | | | | | |
|---|---|---|---|---|---|
| 7 | | | 158-Hebbal | B Venkatesh (SLAO-1), KAS 9483502638 | **Kakumanu Siva Prasad** 9873291190 |
| 8 | 24- Banngalore North | B.M.Vijay Shankar., IAS 9945536838 | 159-Pulakeshi Nagar (SC) | Dr. Shivanna M G, KAS 9513513156/ 7760364337 | |
| 9 | 25- Bangalore Central | Dr. Lokesh.M., IAS 9454949888 | 162-Shivaji Nagara | Dr.S.Nagaraj, KAS 9986475253 | **Kanwal Tanuj** 7634080814 |
| 10 | | | 164-Gandinagar | C.Nagarajm, KAS 8150071951 | |
| 11 | | | 165-Rajaji Nagara | Satish Babu, KAS 9886364047 | **Chander Singh** |
| 12 | | | 168-Chamrajpet | Krishnegowda Thayannanavar, KAS 9448796619 | |
| 13 | | | 160-Sarvagna Nagar | Naveen Joseph, KAS 9945254100 Chidananda, KAS 9449969408 | **Sukhbir Singh Sandhu 9999001061** |
| 14 | | | 161-C V Raman Nagar | M.N.Manjunath, KAS 9448892554 | |
| 15 | | | 163-Shanthi Nagara | Dr.Venkatesh Murthy, KAS 9449264711 | **Puneeth Kumar** 9910816200 |
| 16 | | | 174- Mahadevpura | Managala, KAS 9448715299 Harishipa, KAS 9845608307 | |
| 17 | | | Additional ARO | Amaresh, KAS 9480354143 Ranganath, KAS 9886335884 | |
| 18 | 26- Bangalore South | S.S.Nakul., IAS 9845439107 | 169- Chickpet | Naveen Kumar Raju,KAS 9916648929 | **Amitava Banerjee** 9748687342 |
| 19 | | | 170-Basavanagudi | Dr.Kathyayni Devi, KAS 9845621982 | |
| 20 | | | 166-Govindaraj Nagar | Dr. Mamatha,KAS 9844629339 | **Arvind Kumar** 7461025523 |
| 21 | | | 167- Vijaya Nagar | Dr. Bhaskar, KAS 9342743375 | |
| 22 | | | 171-Padmanbha Nagar | Dr. Dase Gowda KAS9964177512 | **U.V Jose** 9447733947 |
| 23 | | | 172-B T M layout | Siddalinga Reddy, KAS 9964221273 | |
| 24 | | | 173-Jayanagar | R.Prashanth, KAS 9743351379 | **Chandani Tudu** 9475112122 |
| 25 | | | 175-Bommanhalli | Basavaraj, KAS 8693996999 | |

5. ಜಿಲ್ಲಾ ಚುನಾವಣಾಧಿಕಾರಿಗಳ ವ್ಯಾಪ್ತಿಯ 3 ಲೋಕಸಭಾ ಕ್ಷೇತ್ರಗಳಿಗೂ ಪ್ರತ್ಯೇಕ ಮತ ಎಣಿಕೆ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದ್ದು, ಎಣಿಕೆ ಕೇಂದ್ರಗಳ ವಿಳಾಸದ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರಮ ಸಂಖ್ಯೆ | ಚುನಾವಣಾಧಿಕಾರಿ | ಎಣಿಕೆ ಕೇಂದ್ರದ ವಿವರ |
|---|---|---|
| 1 | 24– ಬೆಂಗಳೂರು–ಉತ್ತರ ಲೋಕಸಭಾ ಕ್ಷೇತ್ರ | ಸೇಂಟ್ ಜೋಸೆಫ್ ಇಂಡಿಯನ್ ಹೈ ಸ್ಕೂಲ್, #23, ವಿಠಲ್ ಮಲ್ಯ ರಸ್ತೆ, ಬೆಂಗಳೂರು–560001 |
| 2 | 25– ಬೆಂಗಳೂರು–ಕೇಂದ್ರ ಲೋಕಸಭಾ ಕ್ಷೇತ್ರ | ಮೌಂಟ್‌ಕಾರ್ಮೆಲ್ ಮಹಿಳಾ ಪಿ.ಯು ಕಾಲೇಜು, #58, ಪ್ಯಾಲೇಸ್ ರಸ್ತೆ, ಫಾತಿಮಾ ಬ್ಲಾಕ್, ವಸಂತನಗರ, ಬೆಂಗಳೂರು–560052 |
| 3 | 26– ಬೆಂಗಳೂರು–ದಕ್ಷಿಣ ಲೋಕಸಭಾ ಕ್ಷೇತ್ರ | ಎಸ್.ಎಸ್.ಎಂ.ಆರ್.ವಿ ಪಿ.ಯು ಕಾಲೇಜು, 36ನೇ ಅಡ್ಡರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–560041 |

6. ಮತ ಎಣಿಕೆ ಕಾರ್ಯಕ್ಕೆ ಅಗತ್ಯವಿರುವ ಮತ ಎಣಿಕೆ ಮೇಲ್ವಿಚಾರಕರು, ಸಹಾಯಕರು ಮತ್ತು ಮೈಕ್ರೋಅಬ್ಸರ್‌ಗಳ ಸಂಖ್ಯೆ ಮತ್ತು ಶೇಕಡಾ 20 ರಷ್ಟು ಹೆಚ್ಚುವರಿ ಕಾಯ್ದಿರಿಸಿದ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಲೋಕಸಭಾ ಕ್ಷೇತ್ರದ ಹೆಸರು | ಒಟ್ಟು ವಿಧಾನಸಭಾ ಕ್ಷೇತ್ರಗಳ ಸಂಖ್ಯೆ | ಒಟ್ಟು ಮತ ಎಣಿಕೆ ಮೇಲ್ವಿಚಾರಕರ ಸಂಖ್ಯೆ | ಒಟ್ಟು ಮತ ಎಣಿಕೆ ಸಹಾಯಕರ ಸಂಖ್ಯೆ | ಒಟ್ಟು ಮತ ಎಣಿಕೆ ಮೈಕ್ರೋ ಅಬ್ಸರ್‌ವರ್‌ಗಳ ಸಂಖ್ಯೆ |
|---|---|---|---|---|---|
| 1. | 24-ಬೆಂಗಳೂರು ಉತ್ತರ | 08 | 190 | 190 | 190 |
| 2. | 25-ಬೆಂಗಳೂರು ಕೇಂದ್ರ | 08 | 160 | 160 | 160 |
| 3. | 26-ಬೆಂಗಳೂರು ದಕ್ಷಿಣ | 08 | 147 | 147 | 147 |
| ಒಟ್ಟು ಸಂಖ್ಯೆ | | **24** | **497** | **497** | **497** |

7. ಮತ ಎಣಿಕೆ ಮೇಲ್ವಿಚಾರಕರು ಮತ್ತು ಸಹಾಯಕರಿಗೆ 2 ಹಂತದ ತರಬೇತಿಯನ್ನು ಹಾಗೂ ಮೈಕ್ರೋ ಅಬ್ಸರ್‌ವರ್ಸ್‌ಗೆ 1 ಹಂತದ ತರಬೇತಿಯನ್ನು ನಿಗಧಿಪಡಿಸಲಾಗಿದ್ದು, ಈಗಾಗಲೇ ಮೇಲ್ವಿಚಾರಕರು ಮತ್ತು ಸಹಾಯಕರಿಗೆ ಮೊದಲನೇ ಹಂತದ ತರಬೇತಿಯನ್ನು ದಿನಾಂಕ: 16-05-2019ರಂದು ನೀಡಲಾಗಿದ್ದು, 2ನೇ ಹಂತದ ತರಬೇತಿಯನ್ನು ದಿ: 22-05-2019ರಂದು ನೀಡಲು ವ್ಯವಸ್ಥೆ ಮಾಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಲೋಕಸಭಾ ಕ್ಷೇತ್ರದ ಹೆಸರು | ತರಬೇತಿ ಕೇಂದ್ರದ ವಿವರಗಳು | ಮೇಲ್ವಿಚಾರಕರು ಮತ್ತು ಸಹಾಯಕರ ತರಬೇತಿ ದಿನಾಂಕಗಳು | ಮೈಕ್ರೋ ಅಬ್ಸರ್‌ವರ್‌ಗಳ ತರಬೇತಿ ದಿನಾಂಕ |
|---|---|---|---|---|
| 1. | 24-ಬೆಂಗಳೂರು ಉತ್ತರ | ಮಹಾರಾಣಿ ಮಹಿಳಾ ಕಲಾ & ವಾಣಿಜ್ಯ ಕಾಲೇಜು, ಶೇಷಾದ್ರಿರಸ್ತೆ, ಬೆಂಗಳೂರು | 16-05-2019 ಮತ್ತು 22-05-2019 | 22-05-2019 |
| 2. | 25-ಬೆಂಗಳೂರು ಕೇಂದ್ರ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಪ್ಯಾಲೇಸ್‌ರಸ್ತೆ, ಬೆಂಗಳೂರು | 16-05-2019 ಮತ್ತು 22-05-2019 | 22-05-2019 |
| 3. | 26-ಬೆಂಗಳೂರು ದಕ್ಷಿಣ | ಎನ್.ಎಂ.ಕೆ.ಆರ್.ವಿ.ಮಹಿಳಾ ಕಾಲೇಜು, ಜಯನಗರ ಪೂರ್ವ 1ನೇ ಮತ್ತು 3ನೇ ಬ್ಲಾಕ್, ಬೆಂಗಳೂರು | 16-05-2019 ಮತ್ತು 22-05-2019 | 22-05-2019 |

- ಮಾನ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಮಾದರಿ ಎಣಿಕೆ ಕೇಂದ್ರವನ್ನು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಪ್ಯಾಲೇಸ್‌ರಸ್ತೆ, ಬೆಂಗಳೂರು ಇಲ್ಲಿ ಸಿದ್ಧಪಡಿಸಿ ಎಣಿಕೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ 28-ಲೋಕಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳಿಗೆ ದಿನಾಂಕ: 14-05-2019ರಂದು ಮುಖ್ಯ ಚುನಾವಣಾಧಿಕಾರಿರವರ ವತಿಯಿಂದ ಹೋಟೆಲ್ ರ್‍ಯಾಡಿಂಸನ್ ಬ್ಲೂ (ಏಟ್ರಿಯಾ), ಪ್ಯಾಲೇಸ್ ರಸ್ತೆ ಇಲ್ಲಿ ಕಾರ್ಯಾಗಾರ ನಡೆಸಿ, ಕಾರ್ಯಾಗಾರದ ನಂತರ ಮಾದರಿ ಮತ ಎಣಿಕೆ ಕೇಂದ್ರಕ್ಕೂ ಭೇಟಿ ನೀಡಿಸಲಾಗಿರುತ್ತದೆ. ಇದೇ ಸಂದರ್ಭದಲ್ಲಿ ಮಾನ್ಯ ಭಾರತ ಚುನಾವಣಾ ಆಯೋಗದಿಂದ ಬಂದತಹ ತಂಡದ ಸದಸ್ಯರೂ ಸಹ ಮಾದರಿ ಮತ ಎಣಿಕೆ ಕೇಂದ್ರದ ಸಿದ್ಧತೆ ಬಗ್ಗೆ ಹರ್ಷ ವ್ಯಕ್ತಪಡಿಸಿರುತ್ತಾರೆ.

8. ಮತ ಎಣಿಕೆ ಕಾರ್ಯಕ್ಕೆ ನಿಯೋಜಿಸಿಕೊಳ್ಳಲಾಗಿರುವ ಮೇಲ್ವಿಚಾರಕರು, ಸಹಾಯಕರು ಮತ್ತು ಮೈಕ್ರೋ ಅಬ್ಸರ್‌ವರ್ಸ್‌ಗಳ ವಿವರಗಳನ್ನು 3 ಹಂತದಲ್ಲಿ ರ್‍ಯಾಂಡಮೈಸೇಷನ್ ಪ್ರಕ್ರಿಯೆ ಕೈಗೊಳ್ಳಲಾಗುವುದು ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ರ್‍ಯಾಂಡಮೈಸೇಷನ್ | ಮತ ಎಣಿಕೆ ದಿನಾಂಕಕ್ಕೆ ಮುಂಚಿತವಾಗಿ ನಿಗಧಿಪಡಿಸಿದ ಸಮಯ | ಷರಾ |
|---|---|---|---|
| 1 | 1ನೇ ಹಂತ | ಮತ ಎಣಿಕೆ ದಿನಾಂಕಕ್ಕೆ 1 ವಾರ ಮುಂಚಿತವಾಗಿ | ಜಿಲ್ಲಾ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ |
| 2 | 2ನೇ ಹಂತ | ಮತ ಎಣಿಕೆ ದಿನಾಂಕಕ್ಕೆ 24 ಗಂಟೆಗೆ ಮುಂಚಿತವಾಗಿ | ಎಣಿಕೆ ವೀಕ್ಷಕರ ಸಮ್ಮುಖದಲ್ಲಿ |
| 3 | 3ನೇ ಹಂತ | ಮತ ಎಣಿಕೆ ದಿನದ ಬೆಳಗಿನ 5.00 ಗಂಟೆಗೆ | ಎಣಿಕೆ ವೀಕ್ಷಕರ ಸಮ್ಮುಖದಲ್ಲಿ |

9. ಮತ ಎಣಿಕೆಗೆ ಅನುಕೂಲವಾಗುವಂತೆ ಪ್ರತಿ ವಿಧಾನ ಸಭಾ ಕ್ಷೇತ್ರದ ಎಣಿಕೆ ಕೊಠಡಿಯಲ್ಲಿ ಒಟ್ಟು 14 ಮತ ಎಣಿಕೆ ಟೇಬಲ್‌ಗಳನ್ನು ವ್ಯವಸ್ಥೆ ಮಾಡಲಾಗಿದ್ದು, 300ಕ್ಕೂ ಹೆಚ್ಚು ಮತಗಟ್ಟೆಗಳಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚುವರಿ ಮತ ಎಣಿಕೆ ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದ್ದು, 14 ಮತ ಎಣಿಕೆ ಟೇಬಲ್‌ಗಳಿಗಿಂತ ಹೆಚ್ಚು ಮತ ಎಣಿಕೆ ಟೇಬಲ್‌ಗಳಿರುವ ವಿಧಾನಸಭಾ ಕ್ಷೇತ್ರದ ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಲೋಕಸಭಾ ಕ್ಷೇತ್ರದ ಹೆಸರು | ವಿಧಾನ ಸಭಾ ಕ್ಷೇತ್ರದ ವಿವರ | ಎಣಿಕೆ ಟೇಬಲ್‌ಗಳ ಸಂಖ್ಯೆ |
|---|---|---|---|
| 1 | 24-ಬೆಂಗಳೂರು ಉತ್ತರ | 151- ಕೆ.ಆರ್.ಪುರ<br>152- ಬ್ಯಾಟರಾಯನಪುರ<br>155-ದಾಸರಹಳ್ಳಿ | ತಲಾ 26 ಟೇಬಲ್‌ಗಳು |
| | | 153-ಯಶವಂತಪುರ | 24 ಟೇಬಲ್‌ಗಳು |
| 2 | 25-ಬೆಂಗಳೂರು ಕೇಂದ್ರ | 160-ಸರ್ವಜ್ಞನಗರ | 21 ಟೇಬಲ್‌ಗಳು |
| | | 174-ಮಹದೇವಪುರ | 28 ಟೇಬಲ್‌ಗಳು |
| 3 | 26-ಬೆಂಗಳೂರು ದಕ್ಷಿಣ | 175- ಬೊಮ್ಮನಹಳ್ಳಿ | 24 ಟೇಬಲ್‌ಗಳು |

10. ಮತ ಎಣಿಕೆ ಕಾರ್ಯವು ಬೆಳಿಗ್ಗೆ 8.00 ಗಂಟೆಗೆ ಪ್ರಾರಂಭವಾಗಲಿದ್ದು, 8 ಗಂಟೆಯಿಂದ 8-30ರ ತನಕ ಪೋಸ್ಟಲ್ ಬ್ಯಾಲೆಟ್ ಮತ್ತು ಇ.ಟಿ.ಪಿ.ಬಿ.ಎಸ್. ಮತ ಎಣಿಕೆ ಪ್ರಕ್ರಿಯೆಯು ಸಂಬಂಧಪಟ್ಟ ಚುನಾವಣಾಧಿಕಾರಿಗಳ ಕೊಠಡಿಯಲ್ಲಿ ನಡೆಯಲಿದ್ದು, ಇ.ವಿ.ಎಂ. ಮತ ಎಣಿಕೆ ಕಾರ್ಯವು 8-30 ಗಂಟೆಗೆ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ನಿಗಧಿಪಡಿಸಲಾಗಿರುವ ಮತ ಎಣಿಕೆ ಕೊಠಡಿಗಳಲ್ಲಿ ಸಂಬಂಧಪಟ್ಟ ಸಹಾಯಕ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ಪ್ರಾರಂಭಿಸಲಾಗುತ್ತದೆ.

11. ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿಗಳ ವ್ಯಾಪ್ತಿಯ ಲೋಕಸಭಾ ಕ್ಷೇತ್ರಗಳಿಗೆ ಸ್ವೀಕೃತವಾದ ಪೋಸ್ಟಲ್ ಬ್ಯಾಲೆಟ್ ಮತ್ತು ಇ.ಟಿ.ಪಿ.ಬಿ.ಎಸ್ ವಿವರಗಳು ಈ ಕೆಳಕಂಡಂತ್ತಿವೆ.

| ಕ್ರಮ ಸಂಖ್ಯೆ | ಲೋಕಸಭಾ ಕ್ಷೇತ್ರದ ಹೆಸರು | ಪೋಸ್ಟಲ್ ಬ್ಯಾಲೆಟ್‌ಗಳ ಸಂಖ್ಯೆ | ಇ.ಟಿ.ಪಿ.ಬಿ.ಎಸ್ ಸಂಖ್ಯೆ | ಒಟ್ಟು |
|---|---|---|---|---|
| 1 | 24-ಬೆಂಗಳೂರು ಉತ್ತರ | 4016 | 324 | 4340 |
| 2 | 25-ಬೆಂಗಳೂರು ಕೇಂದ್ರ | 2687 | 191 | 2878 |
| 3 | 26-ಬೆಂಗಳೂರು ದಕ್ಷಿಣ | 4360 | 48 | 4408 |
| **ಒಟ್ಟು** | | **11063** | **563** | **11626** |

12. ಘನವೆತ್ತ ಸರ್ವೋಚ್ಛ ನ್ಯಾಯಾಲಯದ ಆದೇಶ ಮತ್ತು ಮಾನ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಇ.ವಿ.ಎಂ ಮತ ಎಣಿಕೆ ಮುಕ್ತಾಯದ ನಂತರ ಪ್ರತಿ ವಿಧಾನ ಸಭಾ ಕ್ಷೇತ್ರವಾರು ಲಾಟರಿ ಮೂಲಕ 5 ಮತಗಟ್ಟೆಗಳ ವಿ.ವಿ.ಪ್ಯಾಟ್‌ಗಳನ್ನು ಆರಿಸಿ, ವಿ.ವಿ.ಪ್ಯಾಟ್ ಸ್ಲಿಪ್‌ಗಳ ಎಣಿಕೆ ಕಾರ್ಯವನ್ನು ಕೈಗೊಳ್ಳಲಾಗುವುದು. ಇದಕ್ಕೆ ಅಗತ್ಯವಿರುವ ಪಾರದರ್ಶಕ VV PAT Counting Booth and Pigeon hole mesh ವ್ಯವಸ್ಥೆ ಮಾಡಲಾಗಿರುತ್ತದೆ.

13. ಭದ್ರತಾ ವಿವರಗಳು

- ಮತ ಎಣಿಕೆ ಕೇಂದ್ರದಲ್ಲಿ ಒಟ್ಟು 3 ಹಂತದ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.
- ಮತ ಎಣಿಕೆ ಕೇಂದ್ರದಲ್ಲಿ ನಿರ್ಮಿಸಲಾಗಿರುವ ಮಾಧ್ಯಮ ಕೊಠಡಿಗೆ ಮಾಧ್ಯಮ ಪ್ರತಿನಿಧಿಗಳು ಮಾತ್ರ ಮೊಬೈಲ್‌ನೊಂದಿಗೆ ಹಾಜರಾಗಲು ಅವಕಾಶವಿದ್ದು, ಆದರೆ ಮತ ಎಣಿಕೆ ಕೊಠಡಿಗಳಿಗೆ ಪ್ರವೇಶಿಸಲು ಅನುಮತಿ ಇರುವುದಿಲ್ಲ.
- ಅಧಿಕಾರಿ/ಸಿಬ್ಬಂದಿ/ಭದ್ರತಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿ/ಸಿಬ್ಬಂದಿಗಳು ಮತ ಎಣಿಕೆ ಕೇಂದ್ರಕ್ಕೆ ಮೊಬೈಲ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಗಳು ಮತ್ತು ಬ್ಯಾಗ್‌ಗಳೊಂದಿಗೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ.
- **ಅಭ್ಯರ್ಥಿಗಳು/ಅಭ್ಯರ್ಥಿ ಏಜೆಂಟ್ ಹಾಗೂ ಕೌಂಟಿಂಗ್ ಏಜೆಂಟ್‌ಗಳೂ ಸಹ ಮೊಬೈಲ್ ಮತ್ತು ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಕೈ ಬ್ಯಾಗ್‌ನೊಂದಿಗೆ ಪ್ರವೇಶಕ್ಕೆ ಅವಕಾಶವಿಲ್ಲವಾದ್ದರಿಂದ, ಅಂತಹ ಯಾವುದೇ ವಸ್ತುಗಳೊಂದಿಗೆ ಮತ ಎಣಿಕೆ ಕೇಂದ್ರಕ್ಕೆ ಆಗಮಿಸದಿರುವಂತೆ ಕೋರಿದೆ.**
- **ಮತ ಎಣಿಕೆ ಕೇಂದ್ರದ ಭದ್ರತಾ ಹಿತದೃಷ್ಟಿಯಿಂದ ಕೇಂದ್ರದಲ್ಲಿ ಮೊಬೈಲ್ ಮತ್ತು ಇನ್ನಿತರೆ ವಸ್ತುಗಳನ್ನು ಶೇಖರಿಸಿಟ್ಟುಕೊಳ್ಳಲು ಯಾವುದೇ ತರನಾದ ವ್ಯವಸ್ಥೆ ಇರುವುದಿಲ್ಲ.**
- ಭದ್ರತಾ ದೃಷ್ಟಿಯಿಂದ ಎಣಿಕೆ ಕೇಂದ್ರಕ್ಕೆ ಆಗಮಿಸುವ ಅಭ್ಯರ್ಥಿಗಳು ಮತ್ತು ಎಣಿಕೆ ಏಜೆಂಟ್‌ರುಗಳಿಗೆ ಪ್ರತ್ಯೇಕ ದಾರಿಯ ಬ್ಯಾರಿಕೇಡಿಂಗ್ ವ್ಯವಸ್ಥೆ ಸಹ ಮಾಡಲಾಗಿರುತ್ತದೆ.
- ಭದ್ರತಾ ದೃಷ್ಟಿಯಿಂದ ಪ್ರತಿಯೊಂದು ಮತ ಎಣಿಕೆ ಕೊಠಡಿಗಳಲ್ಲಿ ಮತ ಎಣಿಕೆ ಎಜೆಂಟ್‌ರುಗಳಿಗೆ ಪ್ರತ್ಯೇಕವಾದ ಆಸನ ವ್ಯವಸ್ಥೆ ಮತ್ತು 7 ರಿಂದ 10 ಅಡಿಗಳ ವರೆಗೆ ಪ್ರತ್ಯೇಕಿಸುವ ಚಿಕನ್ ಮೆಷ್‌ಗಳನ್ನು ಸಹ ಅಳವಡಿಸಲಾಗಿರುತ್ತದೆ.
- ಭದ್ರತಾ ದೃಷ್ಟಿಯಿಂದ ಮತ ಎಣಿಕೆಯಲ್ಲಿ ಪಾಲ್ಗೊಳ್ಳುವ ಎಲ್ಲಾ ಅಧಿಕಾರಿ / ಸಿಬ್ಬಂದಿ ಮತ್ತು ಮತ ಎಣಿಕೆ ಏಜೆಂಟ್‌ರುಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಬೇಕಿದ್ದು, ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೂ ಪ್ರತ್ಯೇಕ ಬಣ್ಣದ ಗುರುತಿನ ಚೀಟಿಗಳನ್ನು ಮುದ್ರಿಸಿ, ವಿತರಿಸಲಾಗುತ್ತಿದೆ.
- ಪ್ರತಿಯೊಂದು ಮತ ಎಣಿಕೆ ಕೊಠಡಿಗೆ ಇ.ವಿ.ಎಂ. ಮತ್ತು ವಿ.ವಿ.ಪ್ಯಾಟ್‌ಗಳನ್ನು ಭದ್ರತಾ ಕೊಠಡಿಯಿಂದ ಸಾಗಿಸಿಕೊಂಡು ಬರಲು ಪ್ರತ್ಯೇಕ ದಾರಿಯ ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಲಾಗಿದೆ.

14. **ಅಭ್ಯರ್ಥಿಗಳು ಮತ್ತು ಅಭ್ಯರ್ಥಿಗಳ ಏಜೆಂಟ್‌ಗಳು ಮತ ಎಣಿಕೆ ಕೇಂದ್ರದಲ್ಲಿ ಪಾಲಿಸಬೇಕಾದ ನಿಯಮಗಳು ಈ ಕೆಳಕಂಡಂತಿರುತ್ತವೆ.**

- ಅಭ್ಯರ್ಥಿ **ಅಥವಾ** ಅಭ್ಯರ್ಥಿ ಏಜೆಂಟ್ ಮತ ಎಣಿಕೆ ಕೇಂದ್ರದಲ್ಲಿರುವ ಎಲ್ಲಾ ಎಣಿಕಾ ಕೇಂದ್ರಗಳಿಗೆ ಭೇಟಿ ನೀಡಲು ಅವಕಾಶವಿರುತ್ತದೆ.
- ಅಭ್ಯರ್ಥಿ ಮತ ಎಣಿಕಾ ಕೇಂದ್ರದಲ್ಲಿ ಹಾಜರಿದ್ದಲ್ಲಿ ಅಭ್ಯರ್ಥಿಯ ಏಜೆಂಟ್ ಪೋಸ್ಟಲ್ ಬ್ಯಾಲೆಟ್ ಟೇಬಲ್‌ನ ಏಜೆಂಟಾಗಿ ಮಾರ್ಪಟ್ಟು, ನಿಗಧಿತ ಸ್ಥಳದಲ್ಲಿ ಮಾತ್ರ ಇರಲು ಅವಕಾಶವಿರುತ್ತದೆ.
- ಪ್ರತಿ ವಿಧಾನಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರದಲ್ಲಿ ಪ್ರತಿ ಟೇಬಲ್‌ಗೆ ಮತ ಎಣಿಕೆ ಸುತ್ತುವಾರು ನಿಯೋಜಿಸಲಾದ ಮತಗಟ್ಟೆ ಸಂಖ್ಯೆ ವಿವರಗಳನ್ನು ಮತ ಎಣಿಕೆ ಏಜೆಂಟ್‌ಗೆ ಕಾಣುವ ರೀತಿಯಲ್ಲಿ ಪ್ರದರ್ಶಿಸಲಾಗುವುದು.
- ಎಣಿಕಾ ಏಜೆಂಟ್‌ಗಳಿಗೆ ನಿಗಧಿಪಡಿಸಿರುವ ಟೇಬಲ್‌ನ ಮುಂಭಾಗ ಮತ ಎಣಿಕೆ ಏಜೆಂಟ್‌ಗೆ ನಿಗಧಿಪಡಿಸಿರುವ ಸ್ಥಳ ಬಿಟ್ಟು, ಇತರ ಟೇಬಲ್‌ಗಳ ಭಾಗಕ್ಕೆ ತೆರಳಲು ಅವಕಾಶವಿರುವುದಿಲ್ಲ.
- **ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತ ಎಣಿಕೆ ಏಜೆಂಟ್‌ಗಳ ಪೈಕಿ ಕುಳಿತುಕೊಳ್ಳಲು ಆಸನ ವ್ಯವಸ್ಥೆಯು ರಾಷ್ಟ್ರೀಯ ಪಕ್ಷದ ಪ್ರತಿನಿಧಿಗಳು ನಂತರ ಪ್ರಾಂತೀಯ ಪಕ್ಷ ಹಾಗೂ ತದನಂತರ ನೊಂದಾಯಿತ ರಾಜ್ಯ**

**ಪಕ್ಷಗಳ ಪ್ರತಿನಿಧಿಗಳು, ನಂತರ ಮಾನ್ಯತೆ ಇಲ್ಲದ ನೊಂದಾಯಿತ ರಾಜಕೀಯ ಪಕ್ಷದ ಪ್ರತಿನಿಧಿಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳ ಪ್ರತಿನಿಧಿಗಳಿಗೆ ಕ್ರಮವಾಗಿ ಆಸನದ ವ್ಯವಸ್ಥೆಯಲ್ಲಿ ಮೊದಲ ಆದ್ಯತೆ, ಇನ್ನುಳಿದ ಮತ ಎಣಿಕೆ ಏಜೆಂಟ್‌ಗಳು ಕುಳಿತುಕೊಳ್ಳಲು ಆಸನವಿಲ್ಲದಿದ್ದ ಪಕ್ಷದಲ್ಲಿ ನಿಂತುಕೊಂಡೇ ಮತ ಎಣಿಕೆ ಕಾರ್ಯವನ್ನು ವೀಕ್ಷಣೆ ಮಾಡಬೇಕಾಗಿರುತ್ತದೆ. ಆದ್ದರಿಂದ ಈ ಸಂಬಂಧ ಸ್ಪರ್ಧಿತ ಪಕ್ಷದ ಎಲ್ಲಾ ಅಭ್ಯರ್ಥಿಗಳು ಸದರಿ ವಿಷಯವನ್ನು ಎಲ್ಲಾ ಏಜೆಂಟ್‌ಗಳಿಗೆ ತಿಳಿಸುವಂತೆ ಕೋರಿದೆ.**

- ಮತ ಎಣಿಕೆ ಏಜೆಂಟ್‌ಗಳು ಅವರಿಗೆ ನಿಗಧಿಪಡಿಸಿದ ಟೇಬಲ್ ಬಿಟ್ಟು ಇತರ ಕಡೆ ಓಡಾಡುತ್ತಿದ್ದಲ್ಲಿ, ಅಂತಹ ಮತ ಎಣಿಕೆ ಏಜೆಂಟ್‌ಗಳನ್ನು ಕೇಂದ್ರದಿಂದ ಹೊರಹಾಕಲಾಗುವುದು.
- ಮತ ಎಣಿಕೆ ಕೊಠಡಿಯಲ್ಲಿ ಅಭ್ಯರ್ಥಿಗಳು, ಅಭ್ಯರ್ಥಿ ಏಜೆಂಟ್‌ಗಳು ಮತ್ತು ಮತ ಎಣಿಕೆ ಏಜೆಂಟ್‌ಗಳು ನಿಶ್ಯಬ್ದತೆಯನ್ನು ಕಾಪಾಡುವುದರ ಮೂಲಕ ಶಿಸ್ತುಬದ್ಧವಾಗಿ ವರ್ತಿಸುವಂತೆ ಕೋರಿದೆ.
- ಮತ ಎಣಿಕೆಯ ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗುವುದು ಹಾಗೂ ಸದರಿ ವಿಡಿಯೋ ಚಿತ್ರಣದ ಸಂಪೂರ್ಣ ವಿವರದ ಸಿ.ಡಿಯನ್ನು ಅಂತಿಮವಾಗಿ ಅಭ್ಯರ್ಥಿಗಳಿಗೆ ಉಚಿತವಾಗಿ ನೀಡಲಾಗುವುದು.
- ಮತ ಎಣಿಕೆ ಏಜೆಂಟ್‌ಗಳು ಅವರುಗಳಿಗೆ ಸಂಬಂಧಿಸಿದ ಅಭ್ಯರ್ಥಿಗಳ ಮತ ಎಣಿಕೆಯ ಒಟ್ಟು ಸಂಖ್ಯೆಯ ವಿವರಗಳನ್ನು ಅನಾವಶ್ಯಕವಾಗಿ ಚರ್ಚಿಸಿ ಗೊಂದಲ ಸೃಷ್ಟಿಸುವುದನ್ನು ನಿಶೇಧಿಸಿದೆ.
- 17ಸಿನಲ್ಲಿ ದಾಖಲಾಗಿರುವ ಮತಗಳಿಗೂ ಇ.ವಿ.ಎಂ ಯಂತ್ರದಲ್ಲಿ ದಾಖಲಾಗಿರುವ ಮತಗಳಿಗೂ ವ್ಯತ್ಯಾಸ ಕಂಡುಬಂದಲ್ಲಿ ಮತ ಯಂತ್ರದಲ್ಲಿ ದಾಖಲಾಗಿರುವ ಮತಗಳ ಸಂಖ್ಯೆ ಅಂತಿಮವಾಗುತ್ತದೆ.
- ಪ್ರತಿ ಸುತ್ತಿನಲ್ಲೂ ಇ.ವಿ.ಎಂ ಯಂತ್ರಗಳ ಮತಗಳನ್ನು ದಾಖಲು ಮಾಡಿದ 17ಸಿ–ಭಾಗ–2ನ್ನು ಮತ ಎಣಿಕೆ ಏಜೆಂಟ್‌ಗಳು ದೃಢೀಕರಿಸಬೇಕಾಗಿದ್ದು, ಎಲ್ಲಾ ಮತ ಎಣಿಕ ಏಜೆಂಟ್‌ಗಳಿಗೆ ಪೆನ್‌ನೊಂದಿಗೆ ಹಾಜರಿರುವಂತೆ ಈ ಸಂಬಂಧ ಅಭ್ಯರ್ಥಿಗಳು ತಿಳುವಳಿಕೆ ನೀಡುವಂತೆ ಕೋರಿದೆ.
- ಪೋಸ್ಟಲ್ ಬ್ಯಾಲೆಟ್ ಎಣಿಕೆ ಸಂದರ್ಭದಲ್ಲಿ ಯಾವುದೇ ಪೋಸ್ಟಲ್ ಬ್ಯಾಲೆಟ್ ಮತ ವಿಂಗಡಣೆಗೆ ಸಂದರ್ಭದಲ್ಲಿ ಗೊಂದಲ ಸೃಷ್ಟಿಯಾದಲ್ಲಿ, ಚುನಾವಣಾಧಿಕಾರಿಯ ನಿರ್ಧಾರವೇ ಅಂತಿಮವಾಗಿರುತ್ತದೆ.
- ಮತ ಎಣಿಕೆ ಸುತ್ತು ಮುಗಿದ ನಂತರವೇ ಮತ ಎಣಿಕೆ ಏಜೆಂಟ್‌ಗಳು ಹೊರಗೆ ತೆರಳಲು ಅವಕಾಶ ಕಲ್ಪಿಸಲಾಗುವುದು.
- ಮತ ಎಣಿಕೆ ಏಜೆಂಟ್‌ಗಳಿಗೆ ಮತ ಎಣಿಕೆ ಕೇಂದ್ರದಲ್ಲಿ ಯಾವುದೇ ಉಪಹಾರ ಮತ್ತು ಊಟದ ವ್ಯವಸ್ಥೆಯನ್ನು ಚುನಾವಣಾಧಿಕಾರಿಗಳವತಿಯಿಂದ ಮಾಡಲಾಗುವುದಿಲ್ಲ. ಮತ ಎಣಿಕೆ ಕೇಂದ್ರದಲ್ಲಿ ಇರುವ ಕ್ಯಾಂಟೀನ್‌ನಿಂದ ಹಣ ಪಾವತಿಸಿಯೇ ಸೇವೆಯನ್ನು ಬಳಸಿಕೊಳ್ಳಬಹುದಾಗಿರುತ್ತದೆ.
- ಮತ ಎಣಿಕೆಯಲ್ಲಿ ಪಾಲ್ಗೊಳ್ಳುವ ಅಭ್ಯರ್ಥಿಯ ಏಜೆಂಟ್‌ಗಳು, ಮತ ಎಣಿಕೆ ಏಜೆಂಟ್‌ಗಳು ಸ್ವಂತ ವಾಹನದ ನಿಲುಗಡೆಗೆ ಸ್ಥಳಾವಕಾಶವಿಲ್ಲದ ಕಾರಣ, ಅವರುಗಳ ಹಂತದಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳುವಂತೆ ಕೋರಿದೆ.

ಮಾನ್ಯ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತ ಎಣಿಕೆ ಕಾರ್ಯಕ್ಕೆ ಅಗತ್ಯವಿರುವ ಸಕಲ ಸಿದ್ಧತೆಗಳನ್ನು ಸಮರ್ಪಕವಾಗಿ ಮಾಡಿಕೊಳ್ಳಲಾಗಿರುತ್ತದೆ.

ಸಹಿ/–

ಜಿಲ್ಲಾ ಚುನಾವಣಾಧಿಕಾರಿಗಳು

ಬೆಂಗಳೂರು